# ಗಾಂಧಿ! ಇಲ್ಲ...

ಗಾಂಧಿ, ಇಲ್ಲ! ಹೀಗೆಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ನೇರವಾಗಿ ಹೇಳುವುದಿಲ್ಲ. 'ಗಾಂಧಿ ಎಂಬುವನೊಬ್ಬ ಇರಲೇ ಇಲ್ಲ ಎಂದುಕೊಳ್ಳುವುದು ಒಳ್ಳೆಯದು' ಎನ್ನುವುದು ಅವರ ಮಾತಿನ ಅರ್ಥ. ಮಹಾತ್ಮ ಕಟ್ಟಿದ ಕೋಮು ಸಾಮರಸ್ಯದ ಕೋಟೆಯೊಳಗೆ ಆತನ ಹಂತಕರೇ ನುಸುಳಿರುವ ಸಂದರ್ಭದಲ್ಲಿ, ಮಸೀದಿ ಉರುಳಿ ಮಂದಿರ ತಲೆಯೆತ್ತಿ ಮನೆ ಮನ ಮಸಣಗಳ ನಡುವೆ ಗೋಡೆಗಳು ಏಳುತ್ತಿರುವ ಕಾಲಘಟ್ಟದಲ್ಲಿ 'ಗಾಂಧಿ ಎಂಬುವನೊಬ್ಬ ಇರಲೇ ಇಲ್ಲ' ಎಂದು ಮೂಡ್ನಾಕೂಡು ಅವರಿಗೆ ಅನ್ನಿಸಿದೆ. ಈ ಮಾತನ್ನು ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಲು ಅವರದೇ 'ಅಸ್ಪೃಶ್ಯ ಕನ್ಯೆಯ ವಿಷಾದಗೀತೆ' ಕವಿತೆಯನ್ನು ಗಮನಿಸಬೇಕು (ಕೃತಿ: 'ಆ ಮಹಾ ಮುಗುಳುನಗೆ', ಪ್ರ: ಆಕೃತಿ ಪುಸ್ತಕ). ಅದೊಂದು ಬರಿ ಕವಿತೆಯಲ್ಲ, ಸ್ವಾತಂತ್ರ್ಯೋತ್ತರ ಹಾಗೂ ಸ್ವಾತಂತ್ರ್ಯಾನಂತರ ಭಾರತದ ವಿದ್ಯಮಾನಗಳನ್ನು ಕಟ್ಟಿಕೊಡುವ ಕಥನವೂ ಹೌದು.

ಗಾಂಧಿ ಹಾಗೂ ಅಂಬೇಡ್ಕರ್ ಅವರನ್ನು ನಂತರ ರೂಪದಲ್ಲಿ ಮುಖಾಮುಖಿಯಾಗಿಸುವ ಕವಿ ಕಲ್ಪನೆಯೇ ಸೊಗಸಾಗಿದೆ. ಇದನ್ನು ಬರಿಯ ಕಲ್ಪನೆಯೆನ್ನುವುದೇ? ಬಾಪು–ಭೀಮ ಮಾರ್ಗಗಳು ಸಂಧಿಸುವ ನಂಟಸ್ತಿಕೆ ಸಮಾಜದ ಆರೋಗ್ಯಕ್ಕೆ ಅಗತ್ಯ ಎನ್ನುವುದು ಕವಿಯ ಆಶಯ ಇರುವಂತಿದೆ. ಹಲವು ಸಾಧ್ಯತೆಗಳ ಆ ಜಿಜ್ಞಾಸೆಯನ್ನು ಬದಿಗಿರಿಸಿ, ಕಾವ್ಯಕಥನದ ಮುಖ್ಯಭಾಗ ಗಮನಿಸೋಣ.

ದಕ್ಷಿಣಾ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಗಾಂಧಿ ಎಂಬ ವೈಶ್ಯ ವಕೀಲ, ಶೂದ್ರಾತಿಶೂದ್ರ ದೇಶವಾಸಿಗಳನ್ನೆಲ್ಲ ಒಗ್ಗೂಡಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ಜೀವತುಂಬಿದರು. ಗುಲಾಮನನ್ನು ಸಂಕೋಲೆಗಳಿಂದ ಹೊರತಂದು ಸ್ವಾತಂತ್ರ್ಯದ ಹರಿಕಾರರರಾದ ಗಾಂಧಿ, 'ಸಾಕುತಂದೆ' ಎನ್ನಿಸಿಕೊಂಡರು.

ಗಾಂಧಿಕಥನದ ಮತ್ತೊಂದು ತುದಿಗೆ ಅಂಬೇಡ್ಕರ್ ಇದ್ದಾರೆ. 'ಮುಟ್ಟಿಸಿಕೊಳ್ಳಲಾರದ ಅವಮಾನಿತ ಬಿಸಿರಕ್ತದ ಈ ಪಂಚಮ' ಏಕಲವ್ಯ ಮಾರ್ಗದಲ್ಲಿ ಕದ್ದುಮುಚ್ಚಿ ಓದಿಕೊಂಡು ವಿದ್ಯೆಯ ಪರ್ವತವೇ ಆದವರು; ಜಾತಿಭೂತಕ್ಕೊಂದು ವ್ಯಾಖ್ಯೆ ಬರೆದ, ಅದಕ್ಕಾಗಿ ಜೀವಸತ್ವವನ್ನೇ ಧಾರೆ ಎರೆದವರು. ಜ್ಞಾನಶಿಖರವೇ ಆದ ಅಂಬೇಡ್ಕರ್ ಸೃಜಿಸಿದ–ಹೆತ್ತ ಮಗಳ ಹೆಸರು 'ಸಂವಿಧಾನ'. ಈ ಮಗಳ ವಿಷಯ ತಿಳಿದ ಗಾಂಧಿ ಓಡೋಡಿ ಬಂದು, ತಮ್ಮ ಮಗ ಭರತನಿಗೆ ಅಂಬೇಡ್ಕರ್ ಮಗಳು ಸಂವಿಧಾನವೇ ಅನುರೂಪ ವಧು ಎನ್ನುತ್ತಾರೆ. ಗಾಂಧಿ ತಂದ ಪ್ರಸ್ತಾಪಕ್ಕೆ ವಧುವಿನ ಮನೆಯವರು ಬಡಪೆಟ್ಟಿಗೆ ಒಪ್ಪಲಿಲ್ಲ. ಆದರೆ, ಸಾಕುತಂದೆ ಹಟ ಬಿಡುವವರಲ್ಲ. ಮಾತುಕತೆ, ಸಂಧಾನಗಳು ನಡೆದು, 'ಪೂನಾ ಒಪ್ಪಂದ' ಎನ್ನುವ ವರದಕ್ಷಿಣೆ ನೀಡುವುದರೊಂದಿಗೆ ಮದುವೆ ನಡೆಯುತ್ತದೆ. ಹೀಗೆ ಆರಂಭವಾದ ದಾಂಪತ್ಯದ ಬಳ್ಳಿಯಲ್ಲಿ ಸಾಕಾರಗೊಂಡ ಫಲವೇ ಪ್ರಜಾಪ್ರಭುತ್ವವೆಂಬ ಮುದ್ದಾದ ಮಗ!

ಗಾಂಧಿ, ಅಂಬೇಡ್ಕರ್, ಸ್ವಾತಂತ್ರ್ಯ, ಸಂವಿಧಾನ, ಪ್ರಜಾಪ್ರಭುತ್ವ– ಇವುಗಳೆಲ್ಲ ಬರಿಯ ಹೆಸರುಗಳೇನು? ಹೋರಾಟ, ತ್ಯಾಗ, ಬಲಿದಾನಗಳ ಮೂರ್ತರೂಪಗಳಿವು. ವಿಪರ್ಯಾಸ ನೋಡಿ. ತ್ಯಾಗ–ಬಲಿದಾನಗಳ ನೆಲೆಗಟ್ಟಿನಲ್ಲಿ ರೂಪುಗೊಂಡ ಆಧುನಿಕ ಭಾರತದ ಕಳ್ಳುಬಳ್ಳಿ ಕವಲು ಸೊಲ್ಲುಗಳು ತಮ್ಮ ಬೇರುಗಳಿಗಿಂತ ಸಂಪೂರ್ಣ ಭಿನ್ನವಾದವು. ಅಧಿಕಾರಸ್ಥ ಗಂಡ ಅಸ್ಪೃಶ್ಯ ವಧುವಿನ ಸ್ವಾತಂತ್ರ್ಯವನ್ನು ಶಯ್ಯಾಗೃಹಕ್ಕೆ ಸೀಮಿತಗೊಳಿಸಿದ. ಸಮಾನತೆಯ ಎಣ್ಣೆ ಸಾಬೂನಿನಲ್ಲಿ ಮೈ ತೊಳೆದುಕೊಂಡರೂ ಸಮಾಜವೆಂಬ ನಡುಮನೆಗೆ ಪ್ರವೇಶ ನಿರಾಕರಿಸಲಾಯಿತು. ತೆವಳುತ್ತ ಮುಗ್ಗರಿಸುತ್ತ – 'ಸುಳ್ಳುಗಳ ಬಿತ್ತಿ, ಭ್ರಮೆಗಳ ಬೆಳೆ ತೆಗೆಯುತ್ತಾ / ಗೋಮಾತೆಯನ್ನು ರಕ್ಷಿಸುತ್ತಾ, ಮನುಷ್ಯರನ್ನು ಕೊಲ್ಲುತ್ತಾ/ ಕಾಶ್ಮೀರವನ್ನು ಪ್ರತಿದಿನವೂ ಗೆಲ್ಲುತ್ತಾ/ ಸಂಸಾರವಂತೂ ಸಾಗುತ್ತಿದೆ, ನ್ಯಾಯವೆಲ್ಲಿದೆ ಹೇಳಿ?' ಎಂದು ಪ್ರಶ್ನಿಸುತ್ತದೆ ಕವಿತೆ. ವೈಪರೀತ್ಯ ಇಷ್ಟಕ್ಕೆ ಮುಗಿದಿಲ್ಲ: 'ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವವೆಂಬ/ ಕ್ರಾಂತಿ ಬೀಜಗಳು ಮೊಳಕೆಯೊಡೆಯಲೇ ಇಲ್ಲ/ ಬೀಗರಿಬ್ಬರಿಗೂ ಬಾಯಿಕಟ್ಟಿದೆ/ ಧರ್ಮಚಕ್ರವು ಬಾವುಟಕ್ಕೆ ಸೀಮಿತವಾಗಿದೆ/ ಬುದ್ಧ ಮೂಕವಿಸ್ಮಿತನಾಗಿದ್ದಾನೆ.'

ಗಾಂಧಿ–ಅಂಬೇಡ್ಕರರಿಬ್ಬರಿಗೂ ಬಾಯಿಕಟ್ಟಿರುವ ಸನ್ನಿವೇಶದಲ್ಲಿ, ಬುದ್ಧ ಮೂಕವಿಸ್ಮಿತನಾಗಿರುವಾಗ, ಜನಸಾಮಾನ್ಯರ ಪಾಡೇನು? ಅಸಹಾಯಕ ಶ್ರೀಸಾಮಾನ್ಯನಿಗೆ ಗಾಂಧಿ ಎಂಬುವನೊಬ್ಬ ಇರಲೇ ಇಲ್ಲ ಎಂದು ಅನ್ನಿಸಿದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಬುದ್ಧ, ಗಾಂಧಿ, ಅಂಬೇಡ್ಕರ್ ವಿಚಾರಗಳನ್ನು ದೂರವಿಡುವುದೆಂದರೆ, ಅವರನ್ನು ಕಳೆದುಕೊಳ್ಳುವುದೆಂದು ಅರ್ಥ. ಹಾಗೆಂದು, ಈ ನಿರಾಕರಣೆಯನ್ನು ನಿರಾಶಾವಾದ ಎಂದು ಭಾವಿಸಬೇಕಾಗಿಲ್ಲ. ಪ್ರಜಾಪ್ರಭುತ್ವವೆಂಬ ಕೂಸು ಅನಾಥವಾಗಿರುವ ಸಂದರ್ಭದಲ್ಲೂ, 'ನನ್ನದೊಂದು ಮೀಸಲು ಮತವಿದೆ, ಜಾತಿಬಲಿಷ್ಠನಿಗಾಗಿ ಒತ್ತಿ ಬರುತ್ತೇನೆ' ಎನ್ನುವ ಕವಿಯ ಮಾತಿನಲ್ಲಿ ವ್ಯಂಗ್ಯವಿರುವಂತೆಯೇ, ಆಶಾಭಾವವೂ ಇದೆ. ಈ ಆಶಾಭಾವ ಜಿ.ಎಸ್. ಶಿವರುದ್ರಪ್ಪನವರ 'ನನ್ನ ಹಣತೆ' ಕವಿತೆಯ ಸಾಲುಗಳನ್ನು ನೆನಪಿಸುತ್ತದೆ. ಲೆಕ್ಕವೇ ಇರದ ದೀಪಾವಳಿ ಹಡಗುಗಳೇ ಕತ್ತಲಕೂಪದಲ್ಲಿ ಮುಳುಗಿರುವಾಗ ತಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ಕವಿಗಿಲ್ಲ. ಆದರೂ, 'ಹಣತೆ ಹಚ್ಚುತ್ತೇನೆ ನಾನು' ಎನ್ನುತ್ತಾರೆ ಶಿವರುದ್ರಪ್ಪ. ಹಣತೆ ಬೆಳಗುವ ಈ ಹಂಬಲಕ್ಕೆ ಕವಿ ನೀಡುವ ಕಾರಣ: 'ಹಣತೆ ಹಚ್ಚುತ್ತೇನೆ ನಾನೂ;/ ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ,/ ಇರುವಷ್ಟು ಹೊತ್ತು ನಿನ್ನ ಮುಖ ನಾನು ನನ್ನ ಮುಖ ನೀನು/ ನೋಡಬಹುದೆಂಬ ಒಂದೇ ಒಂದು ಆಸೆಯಿಂದ.'

ಹಣತೆ ಹಚ್ಚುವ ಜಿ.ಎಸ್.ಎಸ್. ಅವರ ಹಂಬಲ ಮೂಡ್ನಾಕೂಡು ಅವರ ಕವಿತೆಯಲ್ಲಿ, ಸಂವಿಧಾನವನ್ನು ಉಳಿಸಿಕೊಳ್ಳಬೇಕಾದ ಪ್ರಯತ್ನದ ರೂಪದಲ್ಲಿ ಮುಂದುವರೆದಿದೆ. ಈ ಹಂಬಲ ಸಾರ್ವತ್ರಿಕವಾದಾಗ ಆ ಬೆಳಕಲ್ಲಿ ಬುದ್ಧ, ಬಾಪು, ಭೀಮರ ಮಾರ್ಗಗಳು ಮತ್ತೆ ತೆರೆದುಕೊಳ್ಳಲಾರವೆ? 'ಸಂವಿಧಾನ' ಎಂಬ ಮಗಳನ್ನು ಗೌರವದಿಂದ ನಡೆಸಿಕೊಳ್ಳುವುದರಲ್ಲಿ ವ್ಯಕ್ತಿ–ಸಮಷ್ಟಿಯ ಜೊತೆಗೆ ದೇಶದ ಹಿತವೂ ಇದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಜೀವನವೆಂಬುದು ಸೈಕಲ್ ಸವಾರಿ ಇದ್ದಂತೆ. ಸಮತೋಲನ ಇರಬೇಕೆಂದರೆ ಚಲಿಸುತ್ತಲೇ ಇರಬೇಕು!

  – ಐನ್‌ಸ್ಟೀನ್

- ಸೋತವನಿಗೆ ಮಾತ್ರ ಗೆಲ್ಲಲು ಮತ್ತೊಂದು ಅವಕಾಶ ಇರುತ್ತದೆ.

  –ದ.ರಾ.ಬೇಂದ್ರೆ

- ನೀವು ಬೇರೆಯವರಿಗಾಗಿ ಒಂದು ದೀಪ ಹಚ್ಚಿ. ಅದು ನಿಮ್ಮ ದಾರಿಗೂ ಬೆಳಕಾಗುತ್ತದೆ.

  –ಗೌತಮ ಬುದ್ಧ

- ಉತ್ತಮವಾದುದು ಶ್ರಮವಿಲ್ಲದೆ ಲಭಿಸದು. ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಅಲ್ಲ.

  –ಕುವೆಂಪು

- ಪ್ರಾಣಿ ಜೀವನ ಮಿತವಾದುದು. ಮನುಷ್ಯ ಜೀವನ ಬಹುಮುಖವಾದದ್ದು.

  –ಶಿವರಾಮ ಕಾರಂತ

- ನಾವು ಮಾಡುವ ಕಾರ್ಯವು ಕಾರಣಗಳ ಅನುರೂಪವಾಗಿರುತ್ತದೆ.

  –ಅನುಪಮಾ ನಿರಂಜನ

- ಜೀವಂತವಾದ ಯಾವ ಭಾಷೆಯೂ ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು.

  –ಮಾಸ್ತಿ ವೆಂಕಟೇಶ ಅಯ್ಯಂಗಾರ್

- ವ್ಯಕ್ತಿತ್ವ ಸಾಧನೆ ಹೊಸ ಯುಗದ ಬೀಜಮಂತ್ರ.

  –ರಂ.ಶ್ರೀ. ಮುಗಳಿ

- ಜ್ಞಾನಕ್ಕೆ ವಿದ್ಯೆಯೂ, ವಿದ್ಯೆಗೆ ಓದು ಬರಹವೂ ತಳಹದಿ.

  –ಬಿಎಂಶ್ರೀ

- ಅಹಂಕಾರಿ ಮನುಷ್ಯ ಒಂಟಿಯಾಗಿರಬೇಕಾಗುತ್ತದೆ.

  –ಚೆನ್ನವೀರ ಕಣವಿ